## ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ: ವಿದ್ಯುತ್ ಸರಬರಾಜು ಕಂಪನಿಗಳು ವ್ಯಾಪ್ತಿಯ ಗೃಹ ಜ್ಯೋತಿ ಯೋಜನೆಗೆ ನೊಂದಣಿಗೊಳಿಸಿರುವ ಸ್ಥಾವರಗಳ ಹೆಚ್ಚುವರಿ ಮಾಹಿತಿಯನ್ನು ಸಂಗ್ರಹಿಸಿ ಸೇವಾಸಿಂಧು ತಂತ್ರಾಂಶದಲ್ಲಿ ಇಂಧೀಕರಿಸುವ / ದಾಖಲಿಸುವ ಪ್ರಕ್ರಿಯೆಯ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ:

1. ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ/154/ಪಿಎಸ್ಆರ್/2023 ದಿನಾಂಕ: 20.05.2023.
2. ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ/164/ಪಿಎಸ್ಆರ್/2023 ದಿನಾಂಕ: 05.06.2023.
3. ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ/164/ಪಿಎಸ್ಆರ್/2023 ದಿನಾಂಕ: 15.06.2023.
4. ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ/208/ಪಿಎಸ್ಆರ್/2023 ದಿನಾಂಕ: 17.07.2023.
5. ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ/164/ಪಿಎಸ್ಆರ್/2023 ದಿನಾಂಕ: 29.01.2024.
6. ಸರ್ಕಾರದ ಮುಖ್ಯ ಕಾರ್ಯದರ್ಶಿ ರವರ ಪತ್ರ ಸಂಖ್ಯೆ: ಮುಕಾ/12642192/2026 ದಿನಾಂಕ: 06.06.2026.
7. ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ/139/ಪಿಎಸ್ಆರ್/2026 ದಿನಾಂಕ: 30.06.2026 ಮತ್ತು 31.08.2026.
8. ಬೆ.ವಿ.ಕಂ ಪತ್ರ ಸಂಖ್ಯೆ: ಬೆವಿಕಂ/ಬಿಸಿ22/2025-26/1916 ದಿನಾಂಕ: 30.09.2026.
9. ಮ.ವಿ.ಕಂ ಪತ್ರ ಸಂಖ್ಯೆ: ಮೆಸ್ಕಾಂ/ವ್ಯನಿ/ಹಿಆಕಾ/ಮುಆಅ/225/2026-27 ದಿನಾಂಕ: 30.09.2026.
10. ಹು.ವಿ.ಕಂ ಪತ್ರ ಸಂಖ್ಯೆ: ಹುವಿಸಕಂನಿ/ವ್ಯನಿ (ಹ)/ನಿ(ಕಂ&ಲೆ)/ಉಲೆನಿ(ಕಂ)/ಲೆ(ಕಂ)/ಸಲೆ(ಕಂ)/GJY/26-27/11506 ದಿನಾಂಕ: 30.09.2026.
11. ಗು.ವಿ.ಕಂ ಪತ್ರ ಸಂಖ್ಯೆ: ಗುವಿಸಕಂನಿ/ಮುಆಅ/ನಿ(ಲೆ)/ಉಲೆನಿ(ಕಂ)/ಸಲೆ-2(ಕಂ)/2026-27/56732-35 ದಿನಾಂಕ: 30.09.2026.
12. ಚಾ.ವಿ.ಸ.ನಿ.ನಿ ಪತ್ರ ಸಂಖ್ಯೆ: ಸೆಸ್ಕ್/ಕಂದಾಯ/02/E-62569/2026-27/20503 ದಿನಾಂಕ: 30.09.2026.
13. ಹು.ಗ್ರಾ.ವಿ.ಸ.ಸಂ.ನಿ ಪತ್ರ ಸಂಖ್ಯೆ: HRECS/ACC/2026-27/009/3300 ದಿನಾಂಕ: 30.09.2026.

ಪ್ರಸ್ತಾವನೆ

1. ಗೃಹ ಜ್ಯೋತಿ ಯೋಜನೆಯ ಸೌಲಭ್ಯವನ್ನು ಪಡೆಯಲು ಪ್ರಸ್ತುತ ಸೇವಾಸಿಂಧು ತಂತ್ರಾಂಶದಲ್ಲಿ ನೊಂದಣಿಗೊಳಿಸಲಾಗಿರುವ ಸ್ಥಾವರಗಳ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 04.06.2026 ರಂದು ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಗಳೊಂದಿಗೆ ನಡೆದ ಸಭೆಯಲ್ಲಿ ವಿವಿಧ ಇಲಾಖೆಗಳ ವತಿಯಿಂದ ಅನುಷ್ಠಾನಗೊಳಿಸಿರುವ ಗ್ಯಾರಂಟಿ ಯೋಜನೆಗಳ ಬಗ್ಗೆ ಚರ್ಚಿಸಲಾಗಿರುತ್ತದೆ. ಗೃಹಜ್ಯೋತಿ ಯೋಜನೆಯಡಿ ಸಹಾಯಧನವು ಗೃಹ ಬಳಕೆ ವಿದ್ಯುತ್ ಸ್ಥಾವರಗಳ ಕಂದಾಯ ಖಾತೆಗೆ ಜಮೆಗೊಳ್ಳುವ ಪ್ರಕ್ರಿಯೆ ಅನುಸರಿಸುತ್ತಿರುವ ಹಿನ್ನಲೆಯಲ್ಲಿ ಆಧಾರ್ ಸಂಖ್ಯೆಯೊಂದಿಗೆ ನೊಂದಣಿಗೊಳಿಸಿರುವ ಮಾಲೀಕರು ಹಾಗೂ ಬಾಡಿಗೆದಾರರು ಮೃತಪಟ್ಟಿರುವ, ಬಾಡಿಗೆದಾರರು ಮನೆ ಬದಲಾವಣೆಗೊಳಿಸಿರುವ, ಮನೆ ಖರೀದಿ, ಮಾರಾಟ ಮತ್ತು ಇತರೆ

ಸಂದರ್ಭಗಳಲ್ಲಿ ನೊಂದಣಿದಾರ ಪ್ರಕರಣವಾರು ಪರಿಷ್ಕರಣೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

2. ಈ ಮೇರೆಗೆ ಸರ್ಕಾರದ ಮುಖ್ಯ ಕಾರ್ಯದರ್ಶಿ ರವರ ಟಿಪ್ಪಣಿ ಸಂಖ್ಯೆ: ಮುಕಾ/12642192/2026 ದಿನಾಂಕ: 06.06.2026 ರಲ್ಲಿ ದಿನಾಂಕ: 04.06.2026 ರಂದು ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಗೃಹ ಜ್ಯೋತಿ ಯೋಜನೆಯ ಪ್ರಯೋಜನಗಳು ಜೀವಂತ ಫಲಾನುಭವಿಗಳಿಗೆ ಮಾತ್ರ ತಲುಪುವಂತೆ ಖಚಿತಪಡಿಸಿಕೊಳ್ಳಲು ಮಾನ್ಯ ಮುಖ್ಯ ಮಂತ್ರಿಯವರು ಸೂಚಿಸಿರುವ ಹಿನ್ನಲೆಯಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿರುವ ಸಂಬಂಧ ಮೇಲೆ ಓದಲಾದ ಕ್ರಮ ಸಂಖ್ಯೆ: (7) ರ ಆದೇಶ ದಿನಾಂಕ: 30.06.2026 ರಲ್ಲಿ ಗೃಹ ಜ್ಯೋತಿ ಯೋಜನೆಗೆ ಈಗಾಗಲೇ ನೊಂದಣಿಗೊಳಿಸಿರುವ ಸ್ಥಾವರಗಳಿಗೆ ಸಂಬಂಧಿಸಿದಂತೆ ವಿದ್ಯುತ್ ಸರಬರಾಜು ಕಂಪನಿಗಳ ಸಿಬ್ಬಂದಿ (ಮಾಪಕ ಓದುಗ / ಇತರೆ ಸಿಬ್ಬಂದಿ) ಯವರು ಸದರಿ ಗೃಹಜ್ಯೋತಿ ಸ್ಥಾವರಗಳಿಗೆ ಭೇಟಿ ನೀಡಿ ಮಾಲಿಕ / ಬಾಡಿಗೆದಾರರಿಗೆ ಸಂಬಂಧಿಸಿದಂತೆ ಹೆಚ್ಚುವರಿ ಮಾಹಿತಿಯಾದ ಪಡಿತರ ಚೀಟಿ ಸಂಖ್ಯೆ, ಕರ್ನಾಟಕ ರಾಜ್ಯದ ಮತದಾರರಾಗಿರುವ ಬಗ್ಗೆ, EPIC ಸಂಖ್ಯೆ, ಅರ್ಜಿದಾರರ ಭಾವಚಿತ್ರ, ಅರ್ಜಿದಾರರ ಪ್ರವರ್ಗ, ಆದಾಯ ತೆರಿಗೆ ಪಾವತಿಯ ಬಗ್ಗೆ ಹಾಗೂ ವೃತ್ತಿಯ ಮಾಹಿತಿಗೆ ಸಂಬಂಧಿಸಿದಂತೆ ಅಗತ್ಯ ದಾಖಲಾತಿಗಳನ್ನು ಪಡೆದು ಸೇವಾಸಿಂಧು ತಂತ್ರಾಂಶದಲ್ಲಿ ಇಂಧೀಕರಿಸಲು ಆದೇಶಿಸಲಾಗಿರುತ್ತದೆ. ಸದರಿ ಪ್ರಕ್ರಿಯೆಯನ್ನು ದಿನಾಂಕ: 01.07.2026 ರಿಂದ ಕೈಗೆತ್ತಿಕೊಳ್ಳುವಂತೆ ಹಾಗೂ ಎರಡು ತಿಂಗಳೊಳಗಾಗಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಂತೆ ತಿಳಿಸಲಾಗಿರುತ್ತದೆ.

3. ಮೇಲೆ ಓದಲಾದ ಕ್ರಮ ಸಂಖ್ಯೆ: (7) ರ ಆದೇಶ ದಿನಾಂಕ: 31.08.2026 ರಲ್ಲಿ ವಿದ್ಯುತ್ ಸರಬರಾಜು ಕಂಪನಿಗಳು ಕೋರಿರುವಂತೆ, ಬೀಗ ಹಾಕಿರುವ, "Data Not Found", ಗೃಹಜ್ಯೋತಿ ಯೋಜನೆಗೆ ನೊಂದಣಿಗೊಳಿಸದೆ ನೇರವಾಗಿ ಸೇವಾಸಿಂಧು ತಂತ್ರಾಂಶದಲ್ಲಿ ಅರ್ಹಗೊಳಿಸಲಾಗಿರುವ ಭಾಗ್ಯಜ್ಯೋತಿ / ಕುಟೀರಜ್ಯೋತಿ / ಅಮೃತಜ್ಯೋತಿ ಸ್ಥಾವರಗಳ ಮಾಹಿತಿಯನ್ನು ಪಡೆದು ಸೇವಾಸಿಂಧು ತಂತ್ರಾಂಶದಲ್ಲಿ ಇಂಧೀಕರಿಸಲು ಒಂದು ತಿಂಗಳ ಹೆಚ್ಚುವರಿ ಕಾಲಾವಕಾಶವನ್ನು ವಿಸ್ತರಿಸಿ ಆದೇಶಿಸಲಾಗಿರುತ್ತದೆ.

4. ಮುಂದುವರೆದು, ಮೇಲೆ ಓದಲಾದ ಕ್ರ.ಸಂ (8) ರಿಂದ (13) ರ ಪತ್ರಗಳಲ್ಲಿ ವಿದ್ಯುತ್ ಸರಬರಾಜು ಕಂಪನಿಗಳು ಮತ್ತು ಹುಕ್ಕೇರಿ ಸೊಸೈಟಿ ರವರುಗಳು ಮತದಾರರ ಗುರುತಿನ ಚೀಟಿ ವಿವರಗಳ ಪರಿಶೀಲನೆ, Door Locked/Vacant ಸ್ಥಾವರಗಳ ಪುನರ್ ಭೇಟಿ, ಮಾಹಿತಿ ನೀಡಲು ನಿರಾಕರಿಸಿರುವ ಪ್ರಕರಣಗಳಲ್ಲಿ ಸ್ಥಳ ಪರಿಶೀಲನೆ, ಶಾಶ್ವತ ನಿಲುಗಡೆಗೊಂಡಿರುವ, ಜಕಾತಿ ಬದಲಾವಣೆಯಾಗಿರುವ, ಸೌರಶಕ್ತಿ ಮೇಲ್ಛಾವಣಿ ಹೊಂದಿರುವ ಹಾಗೂ ಇತರೆ ವಿಶೇಷ ಪ್ರಕರಣಗಳ ಮರುಪರಿಶೀಲನೆ ಕಾರಣಗಳಿಂದಾಗಿ ಪರಿಶೀಲನಾ ಕಾರ್ಯದ ಅವಧಿಯನ್ನು ಒಂದು ತಿಂಗಳು (31.10.2026 ರವರೆಗೆ) ವಿಸ್ತರಿಸಲು ಕೋರಿರುತ್ತಾರೆ.

5. ಗೃಹ ಜ್ಯೋತಿ ಯೋಜನೆಗೆ ಈಗಾಗಲೇ ನೊಂದಣಿಗೊಳಿಸಿರುವ ಸ್ಥಾವರಗಳಿಗೆ ಸಂಬಂಧಿಸಿದಂತೆ ವಿದ್ಯುತ್ ಸರಬರಾಜು ಕಂಪನಿಗಳ ಸಿಬ್ಬಂದಿ (ಮಾಪಕ ಓದುಗ / ಇತರೆ ಸಿಬ್ಬಂದಿ) ಯವರು ಸದರಿ ಗೃಹಜ್ಯೋತಿ ಸ್ಥಾವರಗಳಿಗೆ ಭೇಟಿ ನೀಡಿ ಮಾಲಿಕ / ಬಾಡಿಗೆದಾರರಿಗೆ ಸಂಬಂಧಿಸಿದಂತೆ ಹೆಚ್ಚುವರಿ ಮಾಹಿತಿಯ ಅಗತ್ಯ ದಾಖಲಾತಿಗಳನ್ನು ಪಡೆದು ಸೇವಾಸಿಂಧು ತಂತ್ರಾಂಶದಲ್ಲಿ ಇಂಧೀಕರಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ/139/ಪಿಎಸ್ಆರ್/2026 ದಿನಾಂಕ: 30.06.2026

ಮತ್ತು 31.08.2026 ರಲ್ಲಿ ನೀಡಲಾಗಿರುವ ಒಟ್ಟು ಮೂರು ತಿಂಗಳ ಮರುಪರಿಶೀಲನಾ ಅವಧಿಯ ಜೊತೆಗೆ ಒಂದು ತಿಂಗಳ ಹೆಚ್ಚುವರಿ ಅವಧಿಯನ್ನು ವಿಸ್ತರಿಸಿ (ದಿನಾಂಕ: 31.10.2026 ರೊಳಗಾಗಿ) ಪೂರ್ಣಗೊಳಿಸುವ ಸಂಬಂಧ, ಈ ಕೆಳಕಂಡಂತೆ ಆದೇಶ ಹೊರಡಿಸಲು ಪ್ರಸ್ತಾಪಿಸಲಾಗಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ/139/ಪಿಎಸ್ಆರ್/2026</u>
<u>ಬೆಂಗಳೂರು, ದಿನಾಂಕ: 09.10.2026</u>

1. ಗೃಹ ಜ್ಯೋತಿ ಯೋಜನೆಗೆ ಈಗಾಗಲೇ ನೊಂದಣಿಗೊಳಿಸಿರುವ ಸ್ಥಾವರಗಳಿಗೆ ಸಂಬಂಧಿಸಿದಂತೆ ವಿದ್ಯುತ್ ಸರಬರಾಜು ಕಂಪನಿಗಳ ಸಿಬ್ಬಂದಿ (ಮಾಪಕ ಓದುಗ / ಇತರೆ ಸಿಬ್ಬಂದಿ) ಯವರು ಸದರಿ ಗೃಹಜ್ಯೋತಿ ಸ್ಥಾವರಗಳಿಗೆ ಭೇಟಿ ನೀಡಿ ಮಾಲಿಕ / ಬಾಡಿಗೆದಾರರಿಗೆ ಸಂಬಂಧಿಸಿದಂತೆ ಹೆಚ್ಚುವರಿ ಮಾಹಿತಿಯ ಅಗತ್ಯ ದಾಖಲಾತಿಗಳನ್ನು ಪಡೆದು ಸೇವಾಸಿಂಧು ತಂತ್ರಾಂಶದಲ್ಲಿ ಇಂಧೀಕರಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ದಿನಾಂಕ: 01.07.2026 ರಿಂದ ಜಾರಿಗೆ ಬರುವಂತೆ ಮೂರು ತಿಂಗಳ ಅವಧಿಗೆ ಒಂದು ತಿಂಗಳ ಹೆಚ್ಚುವರಿ ಅವಧಿಯನ್ನು ವಿಸ್ತರಿಸಿ ನಾಲ್ಕು ತಿಂಗಳೊಳಗಾಗಿ (31.10.2026 ರೊಳಗಾಗಿ) ಪೂರ್ಣಗೊಳಿಸುವುದು.

2. ಉಳಿದಂತೆ ಗೃಹಜ್ಯೋತಿ ಯೋಜನೆಗೆ ಸಂಬಂಧಿಸಿದಂತೆ ಈಗಾಗಲೇ ಸರ್ಕಾರದಿಂದ ಹೊರಡಿಸಿರುವ ಎಲ್ಲಾ ಆದೇಶ / ಸುತ್ತೋಲೆಗಳಲ್ಲಿನ ಅಂಶಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಶಾಂತಾ ರಾಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ
SR 9/10

<u>ಇವರಿಗೆ:</u>
ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಇವರಿಗೆ ಪ್ರಕಟಣೆಗಾಗಿ.

<u>ಪ್ರತಿಗಳು:</u>

1. ಮಹಾಲೇಖಪಾಲರು (ಎ&ಇ) / (ಲೆಕ್ಕಪರಿಶೋಧನೆ-1 & ಲೆಕ್ಕಪರಿಶೋಧನೆ-2) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
4. ಮಾನ್ಯ ಮುಖ್ಯ ಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಸಿ.ಆ.ಸು.ಇ (ಇ-ಆಡಳಿತ), ಕೊಠಡಿ ಸಂಖ್ಯೆ: 106, 2ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ / ಕವಿನಿನಿ / ಬೆವಿಕಂ / ಮವಿಕಂ / ಹುವಿಕಂ / ಗುವಿಕಂ / ಚಾವಿಸನಿನಿ / ಹುಕ್ಕೇರಿ.
9. ಮಾನ್ಯ ಉಪ ಮುಖ್ಯ ಮಂತ್ರಿಗಳ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.

10. ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-1), ವಿಧಾನ ಸೌಧ, ಬೆಂಗಳೂರು.
12. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ.
13. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
14. ಸರ್ಕಾರದ ಅಧೀನ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
15. ಶಾಖೆಯ ರಕ್ಷಾ ಕಡತ / ಕಚೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.